ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

20(224) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಕಾರಾಗೃಹ, ಗೃಹ ರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಗಳೂರು ನಗರದಲ್ಲಿರುವ ಜಿಲ್ಲಾ ಕಾರಾಗೃಹವನ್ನು ಸ್ಥಳಾಂತರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಆ) ಈಗಿರುವಂತಹ ಕಾರಾಗೃಹ ಭದ್ರತೆಗೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ (ಕಾರಾಗೃಹ, ಗೃಹ ರಕ್ಷಕದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :—

ಅ) ಮಂಗಳೂರು ಕಾರಾಗೃಹವು ಮಂಗಳೂರು ಪಟ್ಟಣದ ಮಧ್ಯೆ ಇದ್ದು ಕಾರಾಗೃಹದ ಅವಶ್ಯಕತೆಗಳಿಗೆ ಬೇಕಾದ ಸ್ಥಳವನ್ನು ಹೊಂದಿರುತ್ತದೆ. ಯಾವುದೇ ಕಾರಾಗೃಹವನ್ನು ಉತ್ತಮವಾಗಿ ನಡೆಸಬೇಕಾದರೆ ಅಲ್ಲಿನ ಸಿಬ್ಬಂದಿಗೆ ಸರಿಯಾದ ಆರೋಗ್ಯ ರಕ್ಷಣೆ ಬೇಕೆಂದಾಗ ನ್ಯಾಯಾಲಯಗಳಿಗೆ ಕರೆದೊಯ್ಯುವ ಸೌಕರ್ಯ ಮತ್ತು ಕಾರಾಗೃಹದೊಳಗೆ ಗಲಭೆಯಾದಾಗ ಅದನ್ನು ನಿಯಂತ್ರಿಸಲು ಪೊಲೀಸರ ತುರ್ತು ಸಹಾಯ, ಯಾವುದೇ ಖೈದಿ ತಪ್ಪಿಸಿಕೊಂಡಾಗ ಅವನನ್ನು ಹಿಡಿಯಲು ಪೊಲೀಸರ ಸಹಾಯ ಮುಂತಾದ ಸೌಕರ್ಯಗಳು ಬೇಕಾಗುತ್ತದೆ. ಇತ್ತೀಚೆಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಖೈದಿಗಳ ಆರೋಗ್ಯ ರಕ್ಷಣೆಗೆ ಮತ್ತು ತುರ್ತು ಚಿಕಿತ್ಸೆಗೆ ಬಂಳ ಒತ್ತು ಕೊಟ್ಟಿದ್ದು ಎಲ್ಲಾ ದೊಡ್ಡ ಜೈಲುಗಳು ಸುಸಜ್ಜಿತ ಆಸ್ಪತ್ರೆ ಇರುವ ಪಟ್ಟಣಗಳಲ್ಲಿ ಇರಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಮಂಗಳೂರು ಜೈಲು ಉತ್ತಮ ಸ್ಥಳದಲ್ಲಿ ಇರುತ್ತದೆ. ಮಂಗಳೂರಿನಿಂದ 27 ಕಿ.ಮೀ. ದೂರ ಇರುವ ಬಾಳೆಮಣೆ ಎಂಬಲ್ಲಿ ಹೊಸ ಜೈಲು ಕಟ್ಟಲು 30 ಎಕರೆ ಭೂಮಿ ಮಂಜೂರಾಗಿದ್ದು ಅದು ಕಾರಾಗೃಹ ಕಟ್ಟಲು ಯೋಗ್ಯವಾದುದಲ್ಲ. ಅಲ್ಲದೆ ಮಂಗಳೂರು ಕಾರಾಗೃಹವನ್ನು ಮಂಗಳೂರಿನಿಂದ 27 ಕಿ.ಮೀ. ದೂರದಲ್ಲಿ ಕಟ್ಟಿದಲ್ಲಿ ಅದು ಮಂಗಳೂರು ಕಾರಾಗೃಹವಾಗುವುದಿಲ್ಲ ಮತ್ತು ಅನೇಕ ಆಡಳಿತಾತ್ಮಕ ತೊಂದರೆಗಳಿಗೆ ಅವಕಾಶವಾಗುತ್ತದೆ. ಆದೂ ಅಲ್ಲದೆ ಆ ಜಮೀನು ಒಂದು ವ್ಯಾಜ್ಯದಲ್ಲಿ ಸಿಕ್ಕಿರುತ್ತದೆ. ಮೇಲಿನ ಎಲ್ಲಾ ಕಾರಣಗಳಿಂದ ಮಂಗಳೂರು ಜೈಲನ್ನು ಸ್ಥಳಾಂತರಿಸುವ ಅವಶ್ಯಕತೆ ಇಲ್ಲ ಮತ್ತು ಈಗ ಇರುವ ಸ್ಥಳದಲ್ಲೇ ಅಭಿವೃದ್ಧಿಗೊಳಿಸಬೇಕೆಂದು ನಿರ್ಧರಿಸಲಾಗಿದೆ.

ಅ) ಹಾಲಿ ಇರುವ ಮಂಗಳೂರು ಕೇಂದ್ರ ಕಾರಾಗೃಹವನ್ನು ದುರಸ್ತಿಗೊಳಿಸಲು ಕಾರಾಗೃಹಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಡೀಸೆಲ್ ಜನರೇಟರ್ ಸೆಟ್ಟುಗಳು, ಲೋಹಶೋಧಕಗಳು, ಮೋಟಾರ್ ಸೈಕಲ್‌ಗಳು, ದೂರವಾಣಿ ಇವುಗಳನ್ನು ನೀಡಲಾಗಿದೆ. ನೀರು ಮತ್ತು ವಿದ್ಯುತ್ ಪೂರೈಕೆ, ಒಳಚರಂಡಿ ವ್ಯವಸ್ಥೆ ಕಟ್ಟಡಗಳ ದುರಸ್ತಿ ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಆರೋಗ್ಯ ರಕ್ಷಣೆಗಾಗಿ ಆಂಬ್ಯುಲೆನ್ಸ್ ವಾಹನ, ಮಿನಿ ಕ್ಲಿನಿಕಲ್ ಲ್ಯಾಬೊರೇಟರಿ, ಎಕ್ಸರೆ ಯೂನಿಟ್ ಮುಂತಾದವುಗಳನ್ನು ಒದಗಿಸಿದೆ. ಅಲ್ಲಿ ಇರುವ ಸ್ಥಳಾವಕಾಶವನ್ನು ಹೆಚ್ಚಿಸುವ ಸಂಬಂಧ ಯೋಜನೆಯನ್ನು ತಯಾರಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಫ್ಟ್‌ವೇರ್ ಪಾರ್ಕ್‌ಗಳು.

21 (223) ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಮಂಗಳೂರಿನಲ್ಲಿ ಸಾಫ್ಟ್‌ವೇರ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಇದಕ್ಕಾಗಿ ಎಷ್ಟು ಸ್ಥಳವನ್ನು ಕಾದಿಸಿರಿಸಲಾಗಿದೆ?

ಇ) ಈ ಬಗೆ ಎಷ್ಟು ಸಂಸ್ಥೆಗಳೊಂದಿಗೆ ಸರ್ಕಾರದವರು ಒಪ್ಪಂದ ಮಾಡಿಕೊಂಡಿದ್ದಾರೆ ಹಾಗೂ ಇದಕ್ಕೆ ತಗಲಬಹುದಾದ ವೆಚ್ಚ ಎಷ್ಟು?

ಶ್ರೀ ಬಿ.ಎಲ್. ಶಂಕರ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆಗಳ ಸಚಿವರು) :—

ಅ) ಮಂಗಳೂರಿನಲ್ಲಿನ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಮಾಹಿತಿ ತಂತ್ರಜ್ಞಾನದ ಕಾರ್ಯನೀತಿಯಲ್ಲಿ ಕರ್ನಾಟಕ ಸರ್ಕಾರವು ಘೋಷಿಸಿದಂತೆ ಮಾಡಲಾಗುತ್ತಿದೆ. ಈ ದಿಶೆಯಲ್ಲಿ ವರ್ಕ್‌ಶಾಪ್‌ಗಳ ಮತ್ತು ಸೆಮಿನಾರ್‌ಗಳನ್ನು ಮಾಡಲಾಗಿದ್ದು, ಜಾಗದ ಪರಿಶೀಲನೆಯನ್ನು ಮಾಡಿಲಾಗಿದೆ.

ಆ) ಈ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲು ಬೇಕಾದ ಜಾಗವನ್ನು ಮಂಗಳೂರಿನಲ್ಲಿ ಸೇರಿಚೈಲು ಹಳ್ಳಿಯಲ್ಲಿ 4 ಎಕರೆ 75 ಸೆಂಟನ್ನು ಸೂಕ್ತವೆಂದು ಪರಿಗಣಿಸಲಾಗಿದೆ. ಅದೇ ಜಾಗದಲ್ಲಿ 13: 88ಎಕರೆ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲು ಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಇದರ ಸ್ಥಾಪನಾ ಚಟುವಟಿಕೆಯನ್ನು ಮಾಡಲಾಗುತ್ತಿದೆ.